TARRING OF THE ROAD BETWEEN ANDERSONPET, KOLAR GOLD FIELDS TO KUPPAM *VIA* LAXMISAGARA.

*Q.—197. Sri M. C. NARASIMHAN (Kolar Gold Fields)—

Will the Government be pleased to state:—

(*a*) whether they intend taking up the work of tarring the road between Andersonpet, K. G. F. to Kuppam *via* Laxmisagara.

(*b*) the cost involved therefor?

A.— Sri H. K. VEERANNA GOWDH.— (Minister for Public Works and Electricity).

(*a*) There is no such an intention at present.

(*b*) About Rs. 1,75,000.

ಶ್ರೀ ಎಂ. ಸಿ. ನರಸಿಂಹಸ್ವಾ.—ಈ ರಸ್ತೆಯಾರಿಗೆ ಸೇರಿದ್ದು, ಯಾರಿಗಾದರು ಸೇರಿದೆಯೇ?

† ಶ್ರೀ ಎಚ್. ಕೆ. ವೀರಣ್ಣಗೌಡ.—ಕೋಲಾರ ಜಿಲ್ಲೆಯವರಿಗೆ ಸೇರಿದ್ದು.

ಶ್ರೀ ಎಂ. ಸಿ. ನರಸಿಂಹಸ್ವಾ.—ಕೊಲಾರ ಜಿಲ್ಲೆಗೆ ಸೇರಿದ್ದು ಎಂದು ಗೊತ್ತಾಗತ್ತದೆ. ಅದರೆ ಯಾವ ಇಲಾಖೆಗೆ ಸೇರಿದ್ದು? ಸರ್ಕಾರದ ಯಾವುದಾದರು ಇಲಾಖೆಗೆ ಅಥವ ಯಾವುದಾದರು statutary body ಸೇರಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಸ್ಟೇಟ್ ಫಂಡ್ ರೋಡ್ ಅಲ್ಲ..... He knows the information Sir, but, still he wants to question Government on the same point.

ಶ್ರೀ ಎಂ. ಸಿ. ನರಸಿಂಹಸ್ವಾ.—ಅದು ಸ್ಟೇಟ್ ಫಂಡ್ ರಸ್ತೆಯಲ್ಲ ಲೋಕೋಪಯೋಗಿ ಇಲಾಖೆಗೆ ಸೇರಿಲ್ಲ, ಡಿಸ್ಟ್ರಿಕ್ಟ್ ಬೋರ್ಡಿಗೆಸೇರಿಲ್ಲ, ಸ್ಯಾನಿಟರಿ ಬೋರ್ಡಿಗೂ ಸೇರಿಲ್ಲ. ಈ ರಸ್ತೆಗೆ 10-12 ವರ್ಷಗಳಿಂದ ರಿಪೇರಿಮಾಡುವುದಕ್ಕೆ ಕೂಡ ಹಣವನ್ನು ಕೊಡುತ್ತಿಲ್ಲವೆನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದನ್ನು C. D. works and rural Communications ನಲ್ಲಿ ತೆಗೆದುಕೊಂಡು ಕೆಲಸಮಾಡಬೇಕಾಗುತ್ತದೆ.

ಶ್ರೀ ಇ. ನಾರಾಯಣಗೌಡ.—ಹತ್ತುವರ್ಷಗಳ ಕೆಳಗೆ ಲೋಕೋಪಯೋಗಿ ಇಲಾಖೆಯವರು ಈರಸ್ತೆಗೆ ಸ್ಪೆಷಲ್ ರಿಪೇರ್ಸ್ ಮಾಡಿಸಿದ್ದಾರಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಗಾಗ್ಗೆ ಇಂಥ ಕೆಲಸ ಆಗುತ್ತದೆ. ಕೆಲಸಮಾಡಿಸುವವರು ಯಾರು ಇಲ್ಲದೆ ಇದ್ದರೆ, ರಿಪೇರಿ ಕೆಲಸ ಬಹಳ ಅಗತ್ಯವಾಗಿದ್ದರೆ ಅಂಥ ಸಂದರ್ಭಗಳಲ್ಲಿ ಸರ್ಕಾರದವರು ಸ್ಪೆಷಲ್ ಗ್ರಾಂಟ್ ಕೊಟ್ಟು ಕೆಲಸಮಾಡಿಸುವುದು ಅನೇಕ ಕಡೆ ನಡೆದಿದೆ ಒಂದು ಸಲ ಸ್ಪೆಷಲ್ ಗ್ರಾಂಟ್ ಕೊಟ್ಟಮಾತ್ರಕ್ಕೆ ಲೋಕೋಪಯೋಗಿ ಇಲಾಖೆಗೆ ಸೇರಿದ್ದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಇ. ನಾರಾಯಣಗೌಡ.—ಈ ರಸ್ತೆ ಕುಪ್ಪಂ ಮತ್ತು ರಾಬರ್ಟ್‌ಸನ್‌ಪೇಟೆಗಳಿಗೆ ಬಹಳನೇರವಾದ ರಸ್ತೆ ಸಾಮಾನುಸಾಗಿಸುವುದಕ್ಕೆ ಬಹಳ ಅಗತ್ಯವಾದ ರಸ್ತೆಯಾದುದರಿಂದ ರಾರಿಗಳ ಓಡಾಟ ಹೆಚ್ಚಾಗಿದೆ, ಮೂರು ಪ್ರಯಾಣಿಕರ ಬಸ್ಸುಗಳು ಓಡುತ್ತವೆ. ಇಂಥ ರಸ್ತೆಯನ್ನು ಹತ್ತು ವರ್ಷಗಳಿಂದ ರಿಪೇರಿಮಾಡಿಸದೆಯಿರುವುದರಿಂದ ಇದನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡು ಸಾಧ್ಯವಾದಷ್ಟು ಜಾಗ್ರತೆ ರಿಪೇರಿಮಾಡಿಸುವುದಕ್ಕೆ ಸರ್ಕಾರದವರೂ ಮನಸ್ಸು ಮಾಡುತ್ತಾರೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪ್ರಶ್ನೆಯನ್ನು ಪರಿಶೀಲನೆ ಮಾಡಲಾಗುತ್ತದೆ, ಬೇರೆ ಬೇರೆ ಏಜೆನ್ಸಿಯಿಂದ ಹಣವನ್ನು ಒದಗಿಸಿಕೊಂಡು ಕೆಲಸಮಾಡುತ್ತೇವೆ. ಸರ್ಕಾರ ಇದಕ್ಕೆ ಗಮನ ಕೊಡುತ್ತದೆಂದು ಹೇಳುತ್ತೇನೆ.

CONSTRUCTION OF CULVERTS OR BRIDGES FOR STREAMLETS ON THE NARAGUNDA-RON ROAD IN DHARWAR DISTRICT.

*Q.—211. Sri A. J. DODDAMETI (Ron).—

Will the Government be pleased to state:—

(*a*) whether they are aware that traffic and communication would be entirely cut off during the rainy season, as there are no culverts or bridges for the undermentioned streamlets (Hallas), on the Naragunda-Ron Road, Dharwar District.—

(1) Halla near Madagunaki,

(2) Bennihalla near Yavagalli,

(3) Iruveyahalla near Belavanike;

(*b*) if so, whether they will take steps for constructing either culverts or bridges for the above Hallas ?

A.— Sri H. K. VEERANNA GOWDH (Minister for Public Works and Electricity)—

(*a*) Yes.

(*b*) These works will be considered for execution after estimates are sanctioned, depending on the availability of funds and priorities.

ಶ್ರೀ ಎ. ಜಿ. ದೊಡ್ಡಮೇಟಿ.—ಈ ಕೆಲಸಗಳಿಗೆ ಅಂದಾಜೂ ಮಾಡುವುದಾದರೂ ನಡೆದಿದೆಯೇ ಸ್ವಾಮಿ?

†ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಬೆಣ್ಣಿಹಳ್ಳ ಕೆಲಸ ಆಗತಕ್ಕದ್ದು ಸರ್ವೇ ಆಗಿ ಮಂಜೂರಾಗಿದೆ. ಕೆಲಸ ತೆಗೆದುಕೊಳ್ಳಬೇಕಾಗಿದೆ. ಆದರೆ ಬೆಳೆಯಿರುವುದರಿಂದ ಬೆಳೆ ಕಟಾವಾದ ಕೂಡಲೇ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಜಿ. ದೊಡ್ಡಮೇಟಿ.—ತಾವು ಹೇಳುವ ಬೆಣ್ಣಿಹಳ್ಳ ಬೇರೆ, ಇದು ಯಾವಗೆಳ್ಳ ಹತ್ತಿರದ ಬೆಣ್ಣೀಹಳ್ಳ, ನರಗುಂದ ರಸ್ತೆಯಲ್ಲಿರುವುದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲಿ ಉತ್ತರ ಸಿದ್ಧವಾಗಿರುವ ಪ್ರಕಾರ ಬೆಣ್ಣಿಹಳ್ಳದ ಕೆಲಸ ಅಲ್ಲಿ ಬೆಳೆ ಕಟಾವು ಆದಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಇದೆ. ಆದರೆ ಬೇರೆ ಬೆಣ್ಣೆಹಳ್ಳ ಎಂದು ಹೇಳುತ್ತಿರುವುದರಿಂದ ಅದಕ್ಕೆ ಸಂಬಂಧಪಟ್ಟ ರಿಕಾರ್ಡ್ ತರಿಸಿ ನೋಡಬೇಕಾಗುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಮೂರು ಹಳ್ಳಗಳಿಗೂ ಬೇರೆ ಅಂದಾಜುಗಳನ್ನು ತರಿಸುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ತರಿಸುತ್ತೇವೆ.

ಶ್ರೀ ಕೆ. ಪಿ. ಗದಗ್.—ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ರಸ್ತೆ ಸಾರಿಗೆ ಸೌಕರ್ಯವನ್ನು ಬೆಳೆಸಲೇಬೇಕೆಂಬ ಒಂದು ಯೋಜನೆಯಿದೆಯಲ್ಲವೇ?